ಉದಯಪುರದ ಹತ್ತಿರವಿರುವ ಗೋವರ್ಧನ ವಿಲಾಸ ಅರಮನೆಯ ವಾತಾವರಣದಲ್ಲಿ ಶೋಕ ಮಡುಗಟ್ಟಿತ್ತು! ಅರಮನೆಯ ಕಾವಲು ಭಟರಿಂದ ಹಿಡಿದು ರಾಣೀ ವಾಸದವರು, ಅವರ ದಾಸ–ದಾಸಿಯರು ಶೋಕತಪ್ತರಾಗಿ, ಮುಂದೇನು ಮಾಡಬೇಕೆಂಬುದು ತಿಳಿಯದೆ ಅರಮನೆಯ ತುಂಬೆಲ್ಲಾ ರೋದಿಸುತ್ತಾ ಅತ್ತಿತ್ತ ಧಾವಂತದಿಂದ ಓಡಾಡುತ್ತಿದ್ದರು. ಇದಕ್ಕೆಲ್ಲಾ ಮುಖ್ಯ ಕಾರಣವೆಂದರೆ, ಬೇಹುಗಾರರು ಯುದ್ಧಭೂಮಿಯಿಂದ ತಂದಿದ್ದ ಆ ಘನ ಘೋರ ಸುದ್ದಿ! ಮೊಘಲರ ವಿರುದ್ಧ ನಡೆಯುತ್ತಿದ್ದ ಯುದ್ಧದಲ್ಲಿ ರಾಣಾ ಅಮರಸಿಂಗರು ಸೋತು ವೀರಮರಣವನ್ನಪ್ಪಿದ್ದರು. ಮೇವಾಡಕ್ಕೆ ಭಾರೀ ಹಿನ್ನಡೆಯಾಗಿತ್ತು! ರಾಜಧಾನಿಯ ತುಂಬಾ ಈ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು.

ಅರಮನೆ ಗೋವರ್ಧನ ವಿಲಾಸಕ್ಕೆ ಮಂತ್ರಿ ಮಾನ್ಯರು, ಅಕ್ಕಪಕ್ಕದ ರಾಜ್ಯಗಳ ಸಾಮಂತ ರಾಜರು ಧಾವಿಸಿ ಬಂದರು. ಎಲ್ಲರ ಮುಖಗಳಲ್ಲೂ ಪ್ರೇತಕಳೆ ನರ್ತಿಸುತ್ತಿತ್ತು.

ರಾಣಾ ಅಮರ ಸಿಂಗರ ಶವವನ್ನು ಯುದ್ಧ ಭೂಮಿಯಿಂದ ತಂದು ಅರಮನೆಯ ಸಭಾಮಂಟಪದಲ್ಲಿ ಶೃಂಗರಿಸಿ ಸಾರ್ವಜನಿಕರ ದರ್ಶನಕ್ಕೆ ಇಡಲಾಯಿತು. ದುಃಖತಪ್ತರಾದ ಪ್ರಜೆಗಳು ಬಂದು ತಮ್ಮ ರಾಜನ ಮೃತದೇಹವನ್ನು ನೋಡಿ ಕಣ್ಣೀರು ಹಾಕುತ್ತಾ ಹೋಗುತ್ತಿದ್ದರು. ಆದರೆ ಸಾಮಂತ ರಾಜರು ಮತ್ತು ಮಂತ್ರಿ ಮಹೋದಯರು ಈಗ ಗಂಭೀರ ಸಮಸ್ಯೆಯೊಂದನ್ನು ಎದುರಿಸಬೇಕಾಗಿ ಬಂದಿತ್ತು. ಅದೇನೆಂದರೆ ಯಾವ ರಾಣಿಯೂ ಇದುವರೆಗೂ ರಾಣಾ ಅಮರಸಿಂಗರ ಜೊತೆಗೆ ಸತಿಯಾಗಲು ಒಪ್ಪಿರಲಿಲ್ಲ. ಇದರಿಂದ ನೂರಾರು ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆದುಕೊಂಡು ಬರುತ್ತಿದ್ದ ಸತಿಸಹಗಮನ ಪದ್ಧತಿ ಮತ್ತು ಪರಂಪರೆಗೆ ಬಲವಾದ ಹೊಡೆತ ಬೀಳುತ್ತಿತ್ತು. ಅಲ್ಲದೆ ಇಡೀ ಮೇವಾಡದ ರಜಪೂತ ಸಮುದಾಯಕ್ಕೇ ಭರಿಸಲಾಗದ ಅವಮಾನವಾಗುತ್ತಿತ್ತು.

ಇಟ್ಟುಕೊಟ್ಟ ಮುಹೂರ್ತದ ಪ್ರಕಾರ ಸೂರ್ಯೋದಯವಾದ ಎರಡು ಗಂಟೆಗಳೊಳಗಾಗಿ ರಾಣಾರ ದಹನ ಸಂಸ್ಕಾರವನ್ನು ನಡೆಸಬೇಕಾಗಿತ್ತು. ಆದರೆ ಇದುವರೆಗೂ ಯಾವ ಮಹಾರಾಣಿಯೂ ಮಹಾಸತಿಯಾಗಲು ಒಪ್ಪಿರಲಿಲ್ಲ. ಮಂತ್ರಿ ಮಹೋದಯರಿಗೆ ದಿಕ್ಕು ತೋಚದಂತಾಗಿತ್ತು. ಇದಕ್ಕಿದ್ದಂತೆ ಪ್ರಧಾನ ಅಮಾತ್ಯ ಮೇಘರಾಜ ಕೊಠಾರಿಯವರಿಗೆ ಕಿರಿಯ ರಾಣಿ ಅಂಜಾಬಾಯಿಯವರ ಹೆಸರು ನೆನಪಿಗೆ ಬಂತು. ಅವರು ರಾಣೀ ವಾಸದತ್ತ ಹೆಜ್ಜೆ ಹಾಕತೊಡಗಿದರು. ಅವರ ಅದೃಷ್ಟವೆನ್ನುವಂತೆ ದಾರಿಯ ಮಧ್ಯೆ ಅಂಜಾಬಾಯಿಯ ಸೋದರನ ಮಗ ಅನಾಯಾಸವಾಗಿ ಸಿಕ್ಕ. ಪ್ರಧಾನ ಅಮಾತ್ಯರು ಎಲ್ಲಾ ವಿಷಯಗಳನ್ನು ಅವನಿಗೆ ತಿಳಿಸಿದರು. ಅವನು ಇದನ್ನೆಲ್ಲಾ ನಮ್ಮ ತಾಯಿಯವರ ಹತ್ತಿರ ಚರ್ಚಿಸಿ ಇಂತಹ ಗಂಭೀರ ವಿಷಯಗಳ ಬಗ್ಗೆ ಯಾವ ನಿರ್ಧಾರವನ್ನೂ ಕೈಗೊಳ್ಳುವ ಸ್ವಾತಂತ್ರ್ಯ ತನಗಿಲ್ಲವೆಂದು ಕೈಚೆಲ್ಲಿದ.

ಮೇಘರಾಜರು ಈಗ ಮಂತ್ರಿ ಮೆಹತಾ ಗೋಪಾಲದಾಸರ ಮಹಲಿನತ್ತ ಧಾವಿಸಿದರು. ಅಂಜಾಬಾಯಿಯ ತಾಯಿ ಗೋಪಾಲದಾಸರ ಉಪಪತ್ನಿ ಯಾಗಿದ್ದರು. ಮೇಘರಾಜರು ಗೋಪಾಲದಾಸರ ಮಹಲಿಗೆ ಅವಸರವಸರವಾಗಿ ಹೋಗಿ, ಅವರನ್ನು ಜೊತೆಗೆ ಕರೆದುಕೊಂಡು ಅಂಜಾಬಾಯಿಯ ತಾಯಿಯ ಮಹಲಿಗೆ ಬಂದರು. ಇಬ್ಬರೂ ಅವರಿಗೆ ವಿಷಯದ ಸೂಕ್ಷ್ಮತೆ ಮತ್ತು ಗಂಭೀರತೆಗಳನ್ನು ಮನದಟ್ಟು ಮಾಡಿಕೊಟ್ಟು ಹೇಗಾದರೂ ಮಾಡಿ ಮಗಳು ಅಂಜಾಬಾಯಿಯನ್ನು ಸಹಗಮನಕ್ಕೆ ಒಪ್ಪಿಸುವ ಜವಾಬ್ದಾರಿಯನ್ನು ಹೊರಿಸಿದ್ದರು. ಅಷ್ಟಕ್ಕೇ ಸುಮ್ಮನಾಗದೆ ಅವರನ್ನು ತಮ್ಮ ಜೊತೆಗೇ ಕರೆದುಕೊಂಡು ಬಂದು ಅಂಜಾಬಾಯಿಯ ರಾಣೀ ವಾಸದೊಳಕ್ಕೆ ಕಳುಹಿಸಿದರು. ಅಂಜಾಬಾಯಿ ರಾಣಾ ಅಮರಸಿಂಗನ ಉಪಪತ್ನಿಯಾಗಿದ್ದರು. ಅತ್ಯಂತ ಸುಂದರಿಯೂ ಮತ್ತು ಸಂಗೀತ, ನೃತ್ಯದಲ್ಲಿ ಸಾಕಷ್ಟು ಪರಿಣಿತಿಯನ್ನು ಪಡೆದಿದ್ದ ಆಕೆ ತನ್ನ ಯುವಾವಸ್ಥೆಯಲ್ಲೇ ರಾಣಾರ ಪ್ರೀತಿಗೆ ಪಾತ್ರವಾಗಿದ್ದಳು. ಮೋಹವಶರಾದ ರಾಣಾ ಆಕೆ ಉಪಪತ್ನಿಯಾಗಿದ್ದರೂ ಅರಮನೆಯಲ್ಲಿ ಆಕೆಗೆ ರಾಣಿಯ ಸ್ಥಾನಮಾನವನ್ನು ನೀಡಿದ್ದರಿಂದ ಎಲ್ಲರೂ ಆಕೆಯನ್ನು ಗೌರವಾದರಗಳಿಂದ ಕಾಣುತ್ತಿದ್ದರು.

ತನ್ನ ತಾಯಿ ಚಂಪಾಬಾಯಿ ಅತ್ಯಂತ ಉದ್ವಿಗ್ನರಾಗಿ ಮತ್ತು ಖಿನ್ನಮನಸ್ಕರಾಗಿ ಬಂದದ್ದನ್ನು ಕಂಡ ಆಕೆ ಮೇಲೆದ್ದು ಅವರ ಕೈಹಿಡಿದು ಸುಖಾಸನದಲ್ಲಿ ಕುಳ್ಳಿರಿಸಿದಳು. ಕೆಲವು ನಿಮಿಷಗಳವರೆಗೆ ಯಾರೂ ಮಾತನಾಡಲಿಲ್ಲ. ಕೊನೆಗೆ ಚಂಪಾಬಾಯಿಯೇ ಮೌನ ಮುರಿದು ಮಾತನಾಡ ತೊಡಗಿದರು. 'ಮಗಳೇ, ಅಂಜಾ! ಈಗ ನಮ್ಮ ಮುಂದೆ ದೊಡ್ಡ ಧರ್ಮ ಸಂಕಟವೊಂದು ಬಂದು ನಿಂತಿದೆ. ನಿನ್ನ ಪ್ರೀತಿಯ ರಾಣಾರ ದಹನ ಸಂಸ್ಕಾರ ಇನ್ನು ನಾಲ್ಕಾರು ಗಂಟೆಗಳೊಳಗೆ ನಡೆಯಬೇಕಂತೆ. ಆದರೆ ಯಾವ ರಾಣಿಯೂ ಸತಿ ಸಹಗಮನಕ್ಕೆ ಒಪ್ಪಿಲ್ಲವಂತೆ, ನಿನ್ನನ್ನು ರಾಣಾರು ತಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು, ನೀನೂ ಸಹ ಅಷ್ಟೇ! ಈಗ ನಿನ್ನ ತಂದೆ ಮತ್ತು ಪ್ರಧಾನ ಅಮಾತ್ಯ ಮೇಘರಾಜರು ಇಬ್ಬರೂ ನಿನ್ನನ್ನು ಸಹಗಮನಕ್ಕೆ ಒಪ್ಪಿಸಲು ನನ್ನನ್ನು ಕಳಿಸಿದ್ದಾರೆ. ದೊಡ್ಡಮನಸ್ಸು ಮಾಡಿ ನೀನು ಒಪ್ಪಿಕೊಂಡರೆ, ಎಲ್ಲರಿಗೂ ಸಮಾಧಾನವಾಗುತ್ತದೆ. ರಾಣಾ ವಂಶದ ಕೀರ್ತಿಯೂ ಮುಕ್ಕಾಗದೆ ಉಳಿದುಕೊಳ್ಳುತ್ತದೆ. ತಾಯಿಯಾಗಿ ನಾನು ಮಗಳಿಗೆ ಇಂತಹ ಕಠೋರವಾದ ಮತ್ತು ಅಹಿತಕರವಾದ ಬುದ್ಧಿವಾದವನ್ನು ಹೇಳಬಾರದು. ಆದರೆ ಒತ್ತಡಕ್ಕೆ ನಾನು ಒಳಗಾಗಿದ್ದೇನೆ, ಮಗಳೇ!' ಇಷ್ಟು ಮಾತನಾಡಿ ಚಂಪಾಬಾಯಿ ಬಿಕ್ಕಿ ಬಿಕ್ಕಿ ಅಳತೊಡಗಿದರು.

ಆಕೆಯ ಕಣ್ಣೀರನ್ನೊರಸುತ್ತಾ, 'ಮಾ ಜಿ! ನೀವೇಕೆ ವೃಥಾ ದುಃಖಿಸುತ್ತಿದ್ದೀರಿ. ಎಷ್ಟಾದರೂ ಇವು ನಿಮ್ಮ ಅಂತರಾಳದ ಮಾತುಗಳಲ್ಲ. ರಾಣಾರ ಸಾವಿನಿಂದ ನನಗೂ ಆಘಾತ, ದುಃಖಗಳುಂಟಾಗಿವೆ, ಪರಿಸ್ಥಿತಿ ಅತ್ಯಂತ ಸೂಕ್ಷ್ಮವಾಗಿರುವುದೇನೋ ನಿಜ. ಆದರೆ ಹಾಗೆಂದು ಕಿರಿಯವಳಾದ ನಾನೇಕೆ ಸತಿ ಹೋಗಬೇಕು? ಸಾಕಷ್ಟು ಸುಖ–ಸೌಲಭ್ಯಗಳನ್ನು ಅನುಭವಿಸಿದ ಹಿರಿಯ ರಾಣಿಯರು ಅಂತಃಪುರದಲ್ಲಿದ್ದಾರಲ್ಲಾ, ಅವರ ಪೈಕಿ ಯಾರಾದರೊಬ್ಬರ ಮೇಲೆ ಏಕೆ ಒತ್ತಡ ಹಾಕಬಾರದು? ಅಮ್ಮಾ, ನನಗೂ ಸಹ ಸತಿಯಾಗಲು ಇಷ್ಟವಿಲ್ಲ. ನನ್ನ ನಿರ್ಧಾರವನ್ನು ಅಪ್ಪಾಜಿ ಮತ್ತು ಮೇಘರಾಜರಿಗೆ ಸ್ಪಷ್ಟವಾಗಿ ತಿಳಿಸಿಬಿಡಿ' ಎಂದು ತನ್ನ ಅಂತರಂಗವನ್ನು ತಾಯಿಯ ಮುಂದೆ ತೆರೆದಿಟ್ಟಳು ಅಂಜಾಬಾಯಿ.

ಚಂಪಾಬಾಯಿಯು ಹೊರಬಂದು ಕಾತರದಿಂದ ಕಾಯುತ್ತಾ ನಿಂತಿದ್ದ ತನ್ನ ಪತಿ ಮತ್ತು ಮೇಘರಾಜ ಕೊಠಾರಿಯವರಿಗೆ ಅಂಜುತ್ತಂಜುತ್ತಾ ಅಂಜಾಬಾಯಿಯ ನಿರ್ಧಾರವನ್ನು ತಿಳಿಸಿದರು. ಇದನ್ನು ಕೇಳಿದ ಅವರಿಗೆ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು.

ಈಗ ಕತ್ತಲೆ ಕಳೆದು ಮೂಡಣ ಆಕಾಶದಲ್ಲಿ ಅರುಣರಾಗ ಹರಡ ತೊಡಗಿತ್ತು. ಅರಮನೆಯಲ್ಲಿ ದಾಸ–ದಾಸಿಯರ, ಸೈನಿಕರ, ಮಂತ್ರಿ ಮಹೋದಯರ ಗಡಿಬಿಡಿ ಪ್ರಾರಂಭವಾಗಿತ್ತು. ರಾಣಾ ಅವರ ದಹನ ಸಂಸ್ಕಾರಕ್ಕೆ ಅವಶ್ಯಕವಾದ ಸಿದ್ಧತೆಗಳನ್ನು ಅವಸರವಸರವಾಗಿ ಮಾಡುವುದರಲ್ಲಿ ಅವರು ಮಗ್ನರಾಗಿದ್ದರು.

ಈ ಕಡೆ ಕಟ್ಟ ಕಡೆಯ ಪ್ರಯತ್ನವನ್ನು ಮಾಡೇ ಬಿಡೋಣವೆಂದುಕೊಂಡು, ಅಂಜಾಬಾಯಿಯ ಸೋದರನ ಮಗ, ಮೇಘರಾಜ ಕೊಠಾರಿ ಮತ್ತು ಗೋಪಾಲದಾಸ ಮೂವರೂ ಅಂಜಾಬಾಯಿಯ ಅಂತಃಪುರವನ್ನು ಪ್ರವೇಶಿಸಿ, ಅತ್ಯಂತ ದೀನವದನರಾಗಿ ಮಾತನಾಡತೊಡಗಿದರು–

'ಅಂಜಾಬಾಯಿಯವರೆ! ದಯವಿಟ್ಟು ನಮ್ಮನ್ನು ತಪ್ಪಾಗಿ ಭಾವಿಸಬೇಡಿ. ನಿಮಗೇ ತಿಳಿದಿರುವ ಹಾಗೆ ಯಾವ ಹಿರಿಯ ರಾಣಿಯರೂ ರಾಣಾರ ಜೊತೆ ಸತಿ ಹೋಗಲು ಒಪ್ಪುತ್ತಿಲ್ಲ. ಅವರ ಪ್ರೀತಿಯ ಕಿರಿಯ ರಾಣಿಯವರಾದ ನೀವಾದರೂ ಸತಿ ಸಹಗಮನಕ್ಕೆ ಒಪ್ಪಿ ಮೃತ ರಾಣಾರ ಆತ್ಮಕ್ಕೆ ಶಾಂತಿ ಸಿಗುವ ಹಾಗೆ ಮಾಡುತ್ತೀರೆಂದು ನಂಬಿರುತ್ತೇವೆ. ಇಷ್ಟೇ ಅಲ್ಲದೆ ನಿಮ್ಮ ಸ್ವಾಮಿ ಭಕ್ತಿ ಮತ್ತು ಪತಿಭಕ್ತಿ ಲೋಕವಿಖ್ಯಾತವಾಗುತ್ತದೆ. ಮೇಲಾಗಿ ನಿಮ್ಮ ತ್ಯಾಗ–ಬಲಿದಾನಗಳಿಂದ ರಾಣಾರ ಸೂರ್ಯ ವಂಶದ ಕೀರ್ತಿ ಆ ಚಂದ್ರಾರ್ಕವಾಗಿ ಉಳಿಯುತ್ತದೆ. ಈ ಬಗ್ಗೆ ಚೆನ್ನಾಗಿ ಯೋಚಿಸಿ ಶೀಘ್ರ ನಿರ್ಣಯಕ್ಕೆ ಬರಬೇಕೆಂದು ಪ್ರಾಂಜಲ ಮನಸ್ಸಿನಿಂದ ವಿನಂತಿಸಿ ಕೊಳ್ಳುತ್ತೇವೆ..' ತಮ್ಮೆಲ್ಲ ಬುದ್ಧಿ, ಚಾತುರ್ಯದ, ಚಾಣಾಕ್ಷತೆಗಳನ್ನುಪಯೋಗಿಸಿ, ಅಂಜಾಬಾಯಿಯ ಕೋಮಲ ಭಾವನೆಗಳನ್ನು ಬಡಿದೆಬ್ಬಿಸಲು ಅವರು ಪ್ರಯತ್ನಿಸಿದ್ದರು. ಅವರ ಮಾತುಗಳನ್ನು ಸಾವಧಾನದಿಂದ ಕೇಳಿಸಿಕೊಂಡ ಅಂಜಾಬಾಯಿ ಹತ್ತಾರು ನಿಮಿಷಗಳ ಕಾಲ ಆ ಬಗ್ಗೆ ಗಾಢವಾಗಿ ಯೋಚಿಸಿದಳು. ಅವರ ಮಾತಿನಲ್ಲಿ ಸತ್ಯಾಂಶವಿದೆಯೆಂಬುದು ಆಕೆಗೆ ಅರಿವಾಯಿತು. ತನ್ನ ತ್ಯಾಗ ಬಲಿದಾನಗಳಿಂದ ರಾಣಾರ ಆತ್ಮಕ್ಕೆ ಶಾಂತಿ ಸಿಗುವುದಾದರೆ ಮತ್ತು ಸಂಪ್ರದಾಯ ಉಳಿದು ವಂಶದ ಕೀರ್ತಿ ಶತಮಾನಗಳ ಕಾಲ ಉಳಿಯುವುದಾದರೆ ತಾನೇಕೆ ಸತಿ ಹೋಗಲು ಒಪ್ಪಬಾರದು ಎಂದು ಆಕೆ ಚಿಂತಿಸತೊಡಗಿದಳು. ಮೇಲಾಗಿ ರಾಣಾರು ಜೀವಂತವಿದ್ದಾಗ ತನ್ನನ್ನು ಬಹುವಾಗಿ ಪ್ರೀತಿಸುತ್ತಿದ್ದರಲ್ಲದೆ, ತನ್ನ ಅಂತಃಪುರದಲ್ಲೇ ಹೆಚ್ಚು ಸಮಯವನ್ನು ಕಳೆಯುತ್ತಿದ್ದರು. ಇದರಿಂದ ಪಟ್ಟದ ರಾಣಿಯರಲ್ಲದೆ, ಇತರೆ ಹಿರಿಯ